ಹೋಗದೆ ಇದ್ದದ್ದು ಒಳ್ಳೆಯದಾಯಿತು ಅಂದುಕೊಂಡ. ಬಹಳ ಹುಮ್ಮಸ್ಸಿನಿಂದ, 'ಸಂತೋಷ, ಇಲ್ಲಿ ಮೊಲಗಳಿವೆ, ಮಂಗಗಳಿವೆ, ನವಿಲುಗಳಿವೆ, ಮುಂಗುಸಿ, ಕಡವೆಗಳೂ ಕಾಣಲಿಕ್ಕೆ ಸಿಗುತ್ತವೆ. ನೆಲ್ಲಿಕಾಯಿ, ಬುಗುರಿ ನೋಡಿದ್ಯಾ?' – ನಿಹಾಲ್ ಸಂತೋಷನನ್ನು ಕರೆದುಕೊಂಡು ಹೋಗಿ ತೋರಿಸಿದ.

'ಮಂಗಗಳು ಕೊಂಬೆಯಿಂದ ಕೊಂಬೆಗೆ ಎಷ್ಟು ಚೆನ್ನಾಗಿ ಜೋಕಾಲಿ ಆಡುತ್ತವೆ ಗೊತ್ತಾ? ನಾನು ಮರ ಅಲುಗಾಡುವುದನ್ನು ನೋಡಿ ದೆವ್ವ ಅಂತ ಹೆದರಿದ್ದೆ. ಮತ್ತೆ ನೋಡಿದರೆ ಮಂಗಗಳು!' ಅಂದ.

'ಇಲ್ಲಿ ಇಷ್ಟು ಚೆನ್ನಾಗಿರುತ್ತದೆ ಅಂತ ನಮಗೆ ಮೊದಲೇ ಗೊತ್ತಿದ್ದರೆ ಸಂಡೇ ದಿನಾ ಬರಬಹುದಿತ್ತು. ಕಾಡು ಇನ್ನೂ ಚೆನ್ನಾಗಿರಬಹುದು. ರಜೆ ಮುಗಿಯುವ ಮೊದಲು ಕಾಡಿಗೂ ಹೋಗಿಬರೋಣ. ಅಲ್ಲಿ ನಿನಗೆ ಇನ್ನೂ ವಿಶೇಷವಾದುದನ್ನು ತೋರಿಸುತ್ತೇನೆ ಬಾ' – ನಿಹಾಲ್ ಈಗ ಸಂತೋಷನ ಮಾರ್ಗದರ್ಶಿ. ಇಬ್ಬರೂ ಮತ್ತೆ ಸ್ವಲ್ಪ ಮುಂದೆ ಹೋದರು. ನಿಹಾಲ ಕೈ ತೋರಿಸಿದ ಕಡೆ ಸಂತೋಷ ನೋಡಿದ. ತುಂಬ ಅಗಲದ, ಮನುಷ್ಯನಿಗಿಂತಲೂ ನಾಲ್ಕು, ಐದು ಪಟ್ಟು ಎತ್ತರದ ಬಂಡೆಗಳು! ಬಂಡೆಗಳ ಮೇಲೂ ಬಣ್ಣ ಬಣ್ಣದ ಹೂ ಬಿಟ್ಟ ಗಿಡಗಳು!

'ಅಬ್ಬಾ! ಏನು ಚೆನ್ನಾಗಿವೆ ಅಲ್ವೇನೋ? ಬಂಡೆಗಳ ಮೇಲೆ ನಿಂತು, ಬಂಡೆಗಳನ್ನು ಒರಗಿ ನಿಂತು ಸಖತ್ತಾಗಿ ಫೋಟೊ ಹಿಡಿಯಬಹುದು!' ಸಂತೋಷ ಉದ್ಗರಿಸಿದ.

'ಮತ್ತೆ ಅಲ್ಲಿ ನೋಡು...' ನಿಹಾಲ್ ಬಿಳಲುಗಳ ಉಯ್ಯಾಲೆ ತೋರಿಸಿದ. ಸಂತೋಷ ಸಂಭ್ರಮದಿಂದ ಉಯ್ಯಾಲೆ ತೂಗಿದ. ನಿಹಾಲ್ ಅವನು ಉಯ್ಯಾಲೆ ತೂಗುತ್ತಿರುವ ವಿಡಿಯೊ ಮಾಡಿದ. ನಿಹಾಲ್ ಉಯ್ಯಾಲೆ ತೂಗುವಾಗ ಸಂತೋಷ ವಿಡಿಯೊ ಮಾಡಿದ.

'ಒಳಗಡೆ ಇನ್ನೂ ಏನೇನು ಆಶ್ಚರ್ಯಗಳಿವೆಯೋ! ಇಲ್ಲಿ ಇಷ್ಟು ಚೆನ್ನಾಗಿದೆ ಅಂತ ಮೊದಲೇ ಗೊತ್ತಾಗಿದ್ದರೆ? ಥೂ! ಆ ಬೆಂಗಳೂರಿಗೆ ಯಾಕೆ ಹೋದೆನೋ ಅನಿಸ್ತಿದೆ ನನಗೆ. ನೀನಾದರೂ ನನಗೆ ಯಾಕೆ ಹೇಳಲಿಲ್ಲ ನಿಹಾಲ್?' ಸಂತೋಷ್ ಆಕ್ಷೇಪಿಸಿದ.

'ನನಗೂ ಗೊತ್ತಿರಲಿಲ್ಲ ಸಂತೋಷ್. ಎಲ್ಲರೂ ಹೋಗುವಾಗ ನನಗೂ ಟೂರ್ ಹೋಗಬೇಕು ಅನ್ನುವ ಆಸೆ ಇತ್ತು. ಪೂಜೆಗಳಿವೆ ಅಂದ್ರು ಅಪ್ಪ. ಮತ್ತೆ ಕೊರೊನಾ ಇರುವಾಗ ಹೋಗುವುದು ಬೇಡ ಅಂದ್ರು. ಅದಕ್ಕೆ ನಾನು ಗುಡ್ಡಕ್ಕೆ ಬಂದದ್ದು' ಅಂದ ನಿಹಾಲ್.

'ಅಷ್ಟು ಸಮಯ, ದುಡ್ಡು ಉಳಿಯಿತು ಬಿಡೋ. ಬೆಂಗಳೂರಿನಲ್ಲಿ ಏನೂ ಇಲ್ಲ. ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ ಅನ್ನುವ ಹಾಗೆ ನಮಗೆ ಬೆಂಗಳೂರು ಅಂದರೆ ಸ್ವರ್ಗ ಅನ್ನುವ ಭ್ರಮೆ. ಸ್ವರ್ಗ ಇಲ್ಲೇ ಇದೆ. ಎಲ್ಲೋ ದೂರದ ಸೌಂದರ್ಯ, ವಿಶೇಷ ನೋಡಲು ಸಾವಿರ ಸಾವಿರ ಖರ್ಚು ಮಾಡಿ ಹೋಗ್ತೇವೆ. ನಮ್ಮ ಹತ್ತಿರದಲ್ಲೇ ಇರುವ ಇಂಥ ಅದ್ಭುತ ಸೌಂದರ್ಯ ನಮಗೆ ಕಾಣಿಸುವುದೇ ಇಲ್ಲ. ಇಲ್ಲಿನ ಸೌಂದರ್ಯದ ಬೆಲೆ, ಮಹತ್ವ ಗೊತ್ತಾಗಬೇಕಾದರೆ ನಗರದ ಮಕ್ಕಳು ಇಲ್ಲಿಗೆ ಬರಬೇಕು' ಎಂದು ಸಂತೋಷ ಹೇಳಿದ.

'ಸರಿ, ನಾವೀಗ ಈ ಕಲ್ಲಿನ ಮೇಲೆ ಕುಳಿತು ತಿಂಡಿ ತಿನ್ನೋಣ' ಎಂದು ಸಂತೋಷನೂ ಕುಳಿತ. ನಂತರ ನಿಹಾಲ್ ತಾನು ಕಟ್ಟಿಕೊಂಡು ಬಂದಿದ್ದ ತಿಂಡಿಗಳನ್ನು ಗೆಳೆಯನಿಗೂ ಕೊಟ್ಟು ತಾನೂ ತಿನ್ನತೊಡಗಿದ.

'ಎಷ್ಟು ರುಚಿಯಾಗಿದೆಯೋ! ಯಾವ ಬೇಕರಿಯದ್ದೋ?' ಸಂತೋಷ ತಿಂಡಿ ತಿನ್ನುತ್ತಲೇ ಪ್ರಶ್ನಿಸಿದ.

'ಅಮ್ಮ ಮಾಡಿದ್ದು ಕಣೋ. ಅಮ್ಮನಿಗೆ ಎಲ್ಲ ತಿಂಡಿಗಳನ್ನೂ ಮಾಡಲು ಗೊತ್ತು. ನನ್ನ ಇಷ್ಟದ ತಿಂಡಿಗಳನ್ನು ಮಾಡಿ ಡಬ್ಬಗಳಲ್ಲಿ ತುಂಬಿಸಿಟ್ಟಿದ್ದಾಳೆ' – ನಿಹಾಲ್ ಹೆಮ್ಮೆಯಿಂದ ಹೇಳಿದ.

'ಇದೂ ಹಾಗೇ ಕಣೋ ನಿಹಾಲ್. ನಾವೆಲ್ಲ ಬೇಕರಿಗೆ ದುಡ್ಡು ಸುರಿಯುವವರು. ನಿನ್ನಮ್ಮನಂತೆ ನನ್ನಮ್ಮನಿಗೂ ಇಷ್ಟು ರುಚಿಯಾಗಿ ತಿಂಡಿ ಮಾಡಲು ಗೊತ್ತಿದ್ದರೆ ನಾನು ಬೇಕರಿಗೆ ಹೋಗುತ್ತಲೇ ಇರಲಿಲ್ಲ' ಎಂದು ಸಂತೋಷ ಹೇಳಿದ.

ಬೇಸರ, ದುಃಖ ಇದ್ದ ನಿಹಾಲನಿಗೆ ಈಗ ಸಂತೋಷ ಇದೆ. ಇನ್ನೂ ರಜೆ ಮುಗಿಯಲು ಐದು ದಿನಗಳಿವೆ. ನಿಹಾಲ್ ಮತ್ತು ಸಂತೋಷರಿಗೆ ಕಾಡು, ಗುಡ್ಡಗಳಲ್ಲಿ ಅಲೆದಾಡುವ ಹುಮ್ಮಸ್ಸಿನಲ್ಲಿ ರಜೆಗಳು ಮುಗಿಯುವುದೇ ಬೇಡ ಅನಿಸುತ್ತಿದೆ!

●